ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 3, July-August 2025, Pp. 177-180
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿ : ಇಣುಕು ನೋಟ

**ಖೈರುನ್ನಿಸಾ ಬೇಗಂ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಭಾಗ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಡಗಂಚಿ, ಕಲಬುರಗಿ

***Abstract:***
*ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹೆಚ್ಚು ಜನಪ್ರಿಯವಾದ, ಶ್ರೀಮಂತವಾದ ಹಾಗೂ ಸಮೃದ್ಧಿಯಾದ ಸಾಹಿತ್ಯ ಪ್ರಕಾರವೆಂದರೆ ಕಾದಂಬರಿ ಪ್ರಕಾರ ಎಂದು ಹೇಳಬಹುದು. ಕಾದಂಬರಿ ರೂಪದ ಸಾಹಿತ್ಯವು ಜನರನ್ನು ಆಕರ್ಷಿಸಿತು ಹಾಗಾಗಿ ಕಾದಂಬರಿ ಸಾಹಿತ್ಯ ಪ್ರಕಾರದಲ್ಲಿ ಕೃಷಿ ಮಾಡಿರುವ ಎಂ.ಎಸ್.ಪುಟ್ಟಣ್ಣ ಅವರ ಮಾಡಿದ್ದುಣ್ಣೋ ಮಹಾರಾಯ ಕಾದಂಬರಿಯಲ್ಲಿ ಬರುವ ಸೀತೆ ಮತ್ತು ಸದಾಶಿವ ದೀಕ್ಷಿತ ಪಾತ್ರಗಳು ಆದರ್ಶವಾಗಿ ಕಾಣುತ್ತವೆ. ದುಷ್ಟರ ಕಣ್ಣಿನಿಂದ ಪಾರಾಗಿ ಬರುವ ಸೀತೆಯ ಕತೆಯನ್ನು ವಿವರಿಸುತ್ತದೆ. ಸಾಂಸಾರಿಕ ಬದುಕಿನ ಚಿತ್ರಣವನ್ನು ಕಟ್ಟಿಕೊಡುತ್ತದೆ.*

***Keywords:*** *ಕನ್ನಡ ಸಾಹಿತ್ಯ, ಕಾದಂಬರಿ, ಮಾಡಿದ್ದುಣ್ಣೋ ಮಹಾರಾಯ, ಎಂ.ಎಸ್.ಪುಟ್ಟಣ್ಣ.*

## ಪೀಠಿಕೆ

ಎಂ.ಎಸ್.ಪುಟ್ಟಣ್ಣ ಅವರು 1854ರಂದು ಚೆನ್ನಪಟ್ಟಣ್ಣದಲ್ಲಿ ಜನಿಸಿದರು. ಶೇಕ್ಸ್‌ಪಿಯರನ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಅಷ್ಟೇಅಲ್ಲದೇ ಕಾದಂಬರಿ, ಜೀವನ ಚರಿತ್ರೆಗಳನ್ನು ಬರೆದಿದ್ದಾರೆ. 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿಯಲ್ಲಿ ಬರುವ ಸೀತೆ, ಸದಾಶಿವ ದೀಕ್ಷಿತರು ಆದರ್ಶ ವ್ಯಕ್ತಿತ್ವವುಳ್ಳವರು. ಸಾಮಾಜಿಕ ಬದುಕಿನಲ್ಲಿ ನಡೆಯುವ ಘಟನೆಯ ಕುರಿತು ನಿರೂಪಿಸುತ್ತಾ, ತಪ್ಪು ಮಾಡಿದವರು ಶಿಕ್ಷೆ ಅನುಭವಿಸಲೇಬೇಕೆಂಬ ನೈತಿಕತೆಯನ್ನು ಎತ್ತಿಹಿಡಿಯುತ್ತದೆ. ಸೀತೆಯ ಮನಸ್ಸಿನಲ್ಲಿ ಪತಿವ್ರತೆಯ ಬಗ್ಗೆ ಉಳಿದಿರುವ ನೆನಪುಗಳು, ಅಮಾಸ ಪಾತ್ರವು ತನ್ನ ಅಕ್ಕಳನ್ನು ಬಹಳ ದಿನದ ನಂತರ ಭೇಟಿಯಾದಾಗ ಚಿಕ್ಕವಯಸ್ಸಿನಲ್ಲಿ ಆದ ಘಟನೆಗಳನ್ನು ಮತ್ತು ಅವಳಿಂದ ದೂರವಾದ ಸಂಗತಿಯನ್ನು ನೆನಪಿಸಿಕೊಂಡು ದುಃಖಪಡುವ ಸಂದರ್ಭವನ್ನು ಕಟ್ಟಿಕೊಡುತ್ತದೆ.

ಸಮಾಜದಲ್ಲಿ ನಡೆಯುವ ಘಟನೆಗಳು, ಸಾಂಸಾರಿಕ ಕಲಹಗಳು, ಕಳ್ಳತನ, ದರೋಡೆ, ಮೋಸ–ವಂಚನೆ, ಸ್ತ್ರೀಯರ ಮೇಲಿನ ಶೋಷಣೆ, ಮಾಟ–ಮಂತ್ರ, ಮಾನವೀಯ ಮೌಲ್ಯಗಳು ಇಡಿಯಾಗಿ ಗ್ರಾಮ್ಯ ಜೀವನದ ಜನರ ಮನಃಸ್ಥಿತಿಗಳ ಚಿತ್ರಣವನ್ನು ಕಟ್ಟಿಕೊಡುವ ಕಥೆಯನ್ನು ನಿರೂಪಿಸಲಾಗಿದೆ. ಸೀತಮ್ಮ ಪಾತ್ರವು ಕತೆಯ ಕೇಂದ್ರಬಿಂದುವಾಗಿ, ಸದಾಶಿವ ದೀಕ್ಷಿತ, ಅಮಾಸ ಪಾತ್ರವನ್ನು ಪರಿಚಯಿಸುವಾಗ ಓದುಗರ ಗಮನವನ್ನು ಅದು ಕೇಂದ್ರೀಕರಿಸುತ್ತದೆ. ಅಮಾಸ ಹೇಳುವ ಕತೆಯ ಸ್ತ್ರೀಯರಿಗೂ, ಸೀತಮ್ಮಳಿಗೂ ಸಾಮ್ಯತೆ ಇರುವಂತೆ ಕಾಣುತ್ತದೆ. ಸೀತಮ್ಮ ಅನುಭವಿಸುವ ನೋವನ್ನು ಆ ಹೆಣ್ಣುಮಗಳು ಅನುಭವಿಸುತ್ತಾಳೆ. ಪಾತ್ರಗಳ

***Please cite this article as:*** ಖೈರುನ್ನಿಸಾ ಬೇಗಂ. (2025). 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿ: ಇಣುಕು ನೋಟ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(3), 177–180

ಮೂಲಕವೇ ಕಥನಕ್ರಿಯೆ ನಡೆಯುತ್ತದೆ. ಕತೆಯು ಪ್ರಾರಂಭವಾಗುವ ಮೊದಲ ಅಧ್ಯಾಯದಲ್ಲಿ ಪಾತ್ರಗಳ ಸಂಭಾಷಣೆಯು ಬೇಸರ ತರಿಸುವಂತಿದ್ದರೂ ಬರುಬರುತ್ತಾ ಕಥನಕ್ರಮವು ಓದಿನ ಚಿತ್ತವನ್ನು ಏಕಾಗ್ರಗೊಳಿಸುವಂತಹದು. ಮೈಸೂರು ಶ್ರೀ ಕೃಷ್ಣರಾಜ ಪ್ರಭುವಿನ ಆಸ್ಥಾನ, ಅವರ ಔದಾರ್ಯ ಗುಣ, ಅವರ ನಿರ್ಣಯಗಳನ್ನು ಕಣ್ಮುಚ್ಚಿ ಒಪ್ಪಿಕೊಳ್ಳುವ ಪ್ರಜೆಗಳು, ಹಳ್ಳಿಯಲ್ಲಿನ ಕೊಳಚೆ, ಅತ್ತೆ-ಸೊಸೆಯರ ಪರಸ್ಪರ ಜಗಳ, ಮಠದ ಉಪಾಧ್ಯಾಯರ ಅತಿರೇಕದ ವರ್ತನೆ, ಬಾಲಕರಿಗೆ ಸುಮ್ಮನೆ ಶಿಕ್ಷಿಸುವ ಮನೋಭಾವ, ಮೇಲ್ನೋಟಕ್ಕೆ ಒಳ್ಳೆಯವರಂತೆ ನಟಿಸಿ, ಅಪ್ಪಾಜಿಯೊಂದಿಗೆ ಸೇರಿ ಸದಾಶಿವ ದೀಕ್ಷಿತರ ಮೇಲೆ ಸೇಡುತೀರಿಸಿಕೊಳ್ಳುವ ಮನೋಭಾವನೆಯಿಂದಲೇ ಸೀತಮ್ಮಳನ್ನು ಪಡೆಯಲು ಯತ್ನಿಸಿದ ಅಪ್ಪಾಜಿಗೆ ಉಪಧ್ಯಾಯರು ಸಹಾಯ ಮಾಡುತ್ತಿದ್ದರು. ಒಂದೇಟಿಗೆ ಎರಡು ಗಿಳಿಗಳನ್ನು ಉರುಳಿಸುವ ಯೋಜನೆ ಅವರದಾಗಿತ್ತು.

ಮಠದ ಉಪಧ್ಯಾಯರು ಬಾಲಕರಿಗೆ ಏಟು ಕೊಟ್ಟಿರುವುದನ್ನು ಹುಡುಗರು ನೆನಪಿಸಿಕೊಂಡು ಮಾತಾಡಿಕೊಳ್ಳುತ್ತಿದ್ದರು. ಮಕ್ಕಳಿಗೆ ತಿಳಿಸಿ ಹೇಳಿ ಬೈಯುತ್ತಾ ಹೇಳಿದರೆ ಕಲಿಯುವುದಿಲ್ಲ. ಪ್ರೀತಿಯಿಂದ ಕಲಿಸಿ, ನಿಮ್ಮ ವರ್ತನೆಗಳನ್ನು ಬದಲಾಯಿಸಿಕೊಳ್ಳಿ ಎಂದು ಉಪಚಾರದ ಮಾತಾಡಿದ ಸದಾಶಿವ ದೀಕ್ಷಿತರ ಒಳ್ಳೆಯ ನಡತೆ, ಗೌರವಯುತವಾದ ವರ್ತನೆ ಅವರಿಗೆ ಕೇಡಾಗುತ್ತದೆಂದು ಅವರು ಕನಸಿನಲ್ಲಿಯೂ ಎಣಿಸಿರಲಿಲ್ಲ. 'ದೀಕ್ಷಿತರು ವಿಷಯವನ್ನು ಶೋಧಿಸಿ ಒಳಹೊಕ್ಕು ಮಾತಾನಾಡುತ್ತಾ ಇರುವಾಗ ಹಿಂದಿನ ಚರ್ಯೆಗಳೆಲ್ಲಾ ಜ್ಞಾಪಕಕ್ಕೆ ಬಂದು ಕೋಪವೂ ಸ್ವಲ್ಪ ತಲೆದೋರುವ ಹಾಗೆ ಮಾತಾನಾಡಲು ಆರಂಭಿಸಿದರು.'[1] ಉಪಾಧ್ಯಾಯರ ಮನಸ್ಸಿನ ಸ್ಥಿತಿಯನ್ನು ಬದಲಾಯಿಸುವ ಪ್ರಯತ್ನ ಮಾಡಿದರು. ಕೃಷ್ಣರಾಜರು ಪ್ರಜೆಗಳ ಕಲ್ಯಾಣಕ್ಕಾಗಿ ಉತ್ತಮ ಕಾರ್ಯಗಳನ್ನು ಮಾಡುತ್ತಿದ್ದರು ಹಾಗಾಗಿ ಎಲ್ಲರು ಅವರನ್ನು ಸ್ಮರಿಸುತ್ತಿದ್ದರು. 'ಲಾಲಿಸಿದರೆ ಮಕ್ಕಳು, ಪೂಜಿಸಿದರೆ ದೇವರು, ಹೂಡಿದರೆ ಓಲೆ, ಕೂಡಿದರೆ ಗಂಡ, ಮಾಡಿದರೆ ಸಂಸಾರ'.[2] ತಿಮ್ಮು ಸೀತಮ್ಮಳನ್ನು ನೆನಪಿಸಿಕೊಂಡು ಕೆಂಡವಾಗುತ್ತಿದ್ದಳು ಆದರೆ ಅವಳ ಮಗ ಕೃಷ್ಣನ ಜೊತೆ ಮಗುವಿನಂತಾಗಿ ಆಟವಾಡುತ್ತಿದ್ದಳು. 'ರೂಪಿನಲ್ಲಿ ಲಕ್ಷಣವಾಗಿಯೂ, ಬುದ್ಧಿಯಲ್ಲಿ ವಿಶೇಷವಾಧ ಪಟುವಾಗಿಯೂ, ಗುಣದಲ್ಲಿ ಹೆಚ್ಚಾದ ಸಾತ್ವಿಕ ಸ್ವಭಾವವುಳ್ಳವನಾಗಿಯೂ ಇದ್ದ ಮಹಾದೇವನಿಗೆ ಬಿದ್ದ ಏಟಿನ ಪ್ರಸ್ತಾಪವನ್ನೇ ಪದೇ ಪದೇ ಮಠದ ಹುಡುಗರೆಲ್ಲಾ ಹೊರಗೂ ಮನೆಯಲ್ಲಿಯೂ ಮಾತಾಡಿಕೊಳ್ಳುತ್ತಾ ಇದ್ದರು. ಪಂತರು ಇತರ ಹುಡುಗರಿಗೆ ಕೊಟ್ಟ ಏಟೂ ಅವರು ಸಂಕಟ ಪಡುವುದೂ ಸಹಿತ ಈ ಸಂದರ್ಭದಲ್ಲಿ ಜ್ಞಾಪಕಕ್ಕೆ ಬರತಕ್ಕದ್ದು ಸಹಜವಾಗಿಯೇ ಇದೆ.'[3] ಚಿಕ್ಕಂದಿನಲ್ಲಿ ಉಪಾಧ್ಯಾಯರ ಕೈಯಲ್ಲಿ ತಿಂದ ಏಟುಗಳನ್ನು ಎಲ್ಲರು ನೆನಪಿಸಿಕೊಳ್ಳುವರು.

ಹಬ್ಬಹರಿದಿನಗಳಲ್ಲಿ ಸೀತೆ ಮಹಾಪತಿವ್ರತೆಯರ ಚರಿತ್ರೆಯನ್ನು ಯಾವಾಗಲೂ ಮನಸ್ಸಿನಲ್ಲಿ ಸ್ಮರಿಸುವಳು. ಪತಿವ್ರತ ಧರ್ಮವನ್ನು ಆಚರಿಸಿದ ಮಹಾಸಾಧ್ವಿ ಸತಿ ಅರುಂಧಮ್ಮಳನ್ನು ವೆಂಕಮ್ಮ ಮತ್ತು ಇತರ ಹೆಂಗಳೆಯರೊಂದಿಗೆ ಕತೆ ಹೇಳುತ್ತಾ ನೆನಪಿಸಿಕೊಳ್ಳುವುದು. ಸೀತೆಯು ಕೇಳಿದ ಮೇಲೆ ಅವಳ ಭಾವನೆಗಳೇ ಬದಲಾದವು. ಸತಿಸಹಗಮನ ಜೀವಂತಿಕೆಯಿಂದಿರುವುದನ್ನು ಅರುಂಧಮ್ಮ ಕತೆಯ ನಿರೂಪಣೆಯಲ್ಲಿ ಗಮನಿಸಬಹುದು. ಇವಳ ಕತೆ ಸೀತೆಯ ಸ್ಮರಣೆಯಲ್ಲಿ ಉಳಿದು ಅವಳು ಅಂದಿನಿಂದ ಸಮಾಧಿಯನ್ನು ಪೂಜಿಸುವ ಪರಿಪಾಠವನ್ನು ಆರಂಭಿಸುವಳು. ಇಂದಿಗೂ ಈ ಪದ್ಧತಿ ಆಚರಣೆಯಲ್ಲಿ ಇಲ್ಲದ್ದಿದ್ದರೂ ಸಹ ಹೆಣ್ಣುಮಕ್ಕಳು

---

[1] ಪುಟ್ಟಣ್ಣ, ಎಂ.ಎಸ್. (1992). *ಮಾಡಿದ್ದುಣ್ಣೋ ಮಹಾರಾಯ.* ಶೇಶಮ್ಮ ಚಿದಂಬರಂ ಕಾವ್ಯಾಲಯ ಪು.64

[2] ಅದೇ. ಪು. 38

[3] ಅದೇ. ಪು.43

ಸಮಾಜದಲ್ಲಿ ಪುರುಷರ ದೌರ್ಜನ್ಯದಿಂದ ಸಂಪೂರ್ಣವಾಗಿ ಬಿಡುಗಡೆಯಾಗಿಲ್ಲ. ಮಲಗಿಕೊಳ್ಳುವಾಗ ಏಳುವಾಗ ಯಾರು ದೇವರ ಸ್ಮರಣೆ ಮಾಡುವುದಿಲ್ಲವೆ? ಅದರಿಂದ ನಿನ್ನ ಮಗಳಿಗೆ ಏನು ಮಾಡಿದ ಹಾಗಾಯಿತು? ಎಂದು ಪಾರ್ವತಮ್ಮ ಪ್ರಶ್ನಿಸಿದಳು. ತಿಮ್ಮು ಪ್ರಪಂಚದಲ್ಲಿ ಯಾರು ದೇವರ ಸ್ಮರಣೆ ಮಾಡುವುದಿಲ್ಲವೇ;ಯಾರು ಕಂಡಿಲ್ಲವೆ? ಎಂದು ಮರುಉತ್ತರಿಸಿದಳು. ಸೀತೆ ರಾತ್ರಿ ಮಲಗುವಾಗ ಮಾಡಿದ ಈ ಕೆಲಸ ಮುಂಜಾನೆ ದೊಡ್ಡ ರಾದ್ಧಾಂತವನ್ನೇ ಸೃಷ್ಟಿಸಿತು. ಅವಳು ತನ್ನದಲ್ಲಾದ ತಪ್ಪಿಗೆ ತಪ್ಪಿತಸ್ಥಳಾಗಿ ನಿಲ್ಲಬೇಕಾಯಿತು. ನೀಲಕಂಠ ಜೋಯಿಸರು ದೈವಾಧೀನರಾದ ವಿಷಯ ತಿಳಿದು ದೊರೆಯು ದುಃಖಿತರಾಗಿ ಅವರನ್ನು ವಿದ್ವಾಂಸರ ಪಟ್ಟಿಗೆ ಸೇರಿಸಬೇಕೆಂಬ ವಿಚಾರ ಮನಸ್ಸಿನಲ್ಲಿತ್ತು. ಚಾಮರಾಜನಗರಕ್ಕೆ ಹೋದಾಗ ಅವರ ನೆನಪು ಬರುತ್ತಿತ್ತು ಎಂದು ದೊರೆಗಳು ನೀಲಕಂಠ ಜೋಯಿಸರು ನೆನಪಿಸಿಕೊಂಡರು. ಅಮಾಸ ತನ್ನ ಚಿಕ್ಕವಯಸ್ಸಿನಲ್ಲಿ ನಡೆದ ಘಟನೆಗಳನ್ನು ಸ್ಮರಿಸಿಕೊಂಡು ಕತೆ ಹೇಳುವ ಕ್ರಮವು ತುಂಬಾ ಸೊಗಸಾಗಿದೆ. ಅಕ್ಕ–ತಮ್ಮ ಇವರ ನಡುವಿನ ಬಾಂಧವ್ಯ, ಅವಳನ್ನು ನೆನಪಿಸಿಕೊಂಡು ಅಮಾಸ(ಜಯಪ್ಪ) ಅಳುವ ಸಂದರ್ಭವಿದೆ. ಮಾದಯ್ಯ ತಮ್ಮ ಕಳ್ಳತನದ ಕಸುಬಿಗೆ ಅಮಾವ್ಯಾಸೆಯ ದಿನ ಹುಟ್ಟಿದವನಾಗಿದ್ದರೆ ಕಂಟಕ ಬರುವುದಿಲ್ಲವೆಂದು ತಿಳಿದು ನಮ್ಮ ಚಿಕ್ಕಪ್ಪನಿಗೆ ಇಪ್ಪತ್ತು ರೂಪಾಯಿಗಳನ್ನು ಕೊಟ್ಟು ನನ್ನನ್ನು ಖರೀದಿಸಿ ಅಮಾಸ ಎಂದು ಹೆಸರಿಟ್ಟರು. ತನ್ನ ಅಕ್ಕಳಿಗೆ ಹಿಂದಿನ ನೆನಪು ಮಾಡಿಸುವನು. ಜಯಪ್ಪನ ನೋಡಿದ ಅವಳಿಗೆ ತಮ್ಮ ಬಾಲ್ಯದಲ್ಲಿ ಅನುಭವಿಸಿದ ನೆನಪು ಬಂತು, ಹಿಂದಿನ ಕತೆಯೆಲ್ಲ ಪುನಃ ಜ್ಞಾಪಕಕ್ಕೆ ಬಂತು. ಈಗ ಅಕ್ಕ ಸುಖವಾಗಿ ಗಂಡ–ಮಕ್ಕಳೊಂದಿಗೆ ಇರುವುದನ್ನು ನೋಡಿದ ಅಮಾಸನಿಗೆ ತುಂಬಾ ಸಂತೋಷವಾಯಿತು. ರಾತ್ರಿ ಇದೇ ಮನೆಯನ್ನೇ ಕಳ್ಳತನ ಮಾಡಬೇಕೆಂಬ ಆಲೋಚನೆಯ ನೆನಪಾದಾಗ ಜಯಪ್ಪನ ಮನಸ್ಸು ಕಳವಳಗೊಂಡಿತು ಆದರೆ ಕುಲಕಸುಬನ್ನು ಮರೆಯುವಂತಿಲ್ಲ. ಕಳ್ಳತನ ಮಾಡಿ ಹೊರಗೆ ಬರುವಾಗ ಗುಡಿಯಲ್ಲಿ ಹೆಣ್ಣಿನ ಅಳುವಿನ ಧ್ವನಿ ಕೇಳಿ ಅಮಾಸ ಅಲ್ಲಿಗೆ ಹೋದನು. 'ಆ ಹೆಂಗಸಿನ ರೂಪವನ್ನು ಪ್ರಾಯವನ್ನೂ ನೋಡಿ ನನಗೆ ಮನಸ್ಸು ಕಳವಳಗೊಂಡಿತು. ನಮ್ಮ ಗುಂಪಿನಲ್ಲಿ ಯಾರೇ ಆಗಲಿ ಪರಸ್ತ್ರೀಗೆ ಆಸೆ ಬಿದ್ದ ಕೂಡಲೆ ನಮ್ಮೂರೆಲ್ಲಾ ಹಾಳಾಗುತ್ತೆ ಎಂದು ನಮ್ಮಪ್ಪ(ಮಾದ) ಹೇಳಿದ ಮಾತು ಜ್ಞಾಪಕಕ್ಕೆ ಬಂತು.'[4] ಅಮಾಸ ಮನಸ್ಸನ್ನು ಶಾಂತಗೊಳಿಸಿ ಆ ಹೆಣ್ಣಿನ ನೋವಿಗೆ ಅಳುವಿಗೆ ಕಾರಣವೆನೆಂದು ತಿಳಿದು ಅವಳ ಸಮಸ್ಯೆಯನ್ನು ಪರಿಹರಿಸಿದನು. ಅಮಾಸನ ಒಳ್ಳೆತನ ಒಂದುಕಡೆ ಮತ್ತೊಂದೆಡೆ ಅಪ್ಪಾಜಿಯ ದೂರ್ತತನ. ಒಳ್ಳೆಯವರ ಜೊತೆ ಕೆಟ್ಟದ್ದು, ಸಂಸ್ಕಾರದ ಜೊತೆಗೆ ಅಸಂಸ್ಕಾರ, ವಿನಯ ಜೊತೆಗೆ ಅವಿನಯ ಇತ್ಯಾದಿ ಅಂಶಗಳು ಸೇರಿಕೊಂಡಿವೆ.

ನಿಸ್ವಾರ್ಥ, ನಿಷ್ಕಲ್ಮಷದಿಂದ ಮಾಡಿದ ಕಾರ್ಯಗಳಿಂದ ನಮಗೆ ಒಳ್ಳಯದೇ ಆಗುತ್ತದೆ. ಕೆಟ್ಟದನ್ನು ಮಾಡಿದವರು ಅನುಭವಿಸಬೇಕು ಎಂಬ ಸಂದೇಶವನ್ನು ಕಾದಂಬರಿಯು ನಿರೂಪಿಸುತ್ತದೆ. ಸೀತೆಯನ್ನು ಚಿತೆಯ ಮೇಲೆ ಹಾಕಿ ಬೆಂಕಿಹಚ್ಚಿ ಬಂದಿದ್ದಾರೆ ಆದರೆ ಸೀತೆ ಶ್ಮಶಾನದಲ್ಲಿ ರೋಧಿಸುತ್ತಿರುವುದನ್ನು ಕೇಳಿ ಒಬ್ಬ ಅತಿಮಾನುಷ, ಅತಿಭಯಂಕರವಾಗಿ ಕಾಣುವ ವ್ಯಕ್ತಿ ಮಾಡಿದ ಕಾರ್ಯ ಮತ್ತು ಪಾರಮಾರ್ಥಿಕತೆಯಿಂದ ಸೀತೆ ಬದುಕುಳಿದಿರುವ ಸಂಧರ್ಭವಿದೆ. ಸೀತೆ ತನ್ನ ಪರಿವಾರಕ್ಕೆ ನಿಜಸಂಗತಿಯನ್ನು ತಿಳಿಸಿದಳು. ಆ ನೀಚ ಅಪ್ಪಾಜಿ ತಾನು ಮಾಡಿದ ಕೃತ್ಯಕ್ಕೆ ಮಾಡಿದ್ದುಣ್ಣೋ ಮಹಾರಾಯ ಎಂಬಂತೆ ಹಲ್ಲುಕಳೆದುಕೊಂಡನು. ಪತಿವ್ರತೆ ಧರ್ಮದ ಮಹತ್ವ, ಸ್ತ್ರೀಯರ ಗಟ್ಟಿತನವನ್ನು ಕಾಣಬಹುದು. ಒಟ್ಟಾರೆಯಾಗಿ ಕಾದಂಬರಿಯು ನೈತಿಕ ಮೌಲ್ಯಗಳನ್ನು, ಸೀತೆಯ ಸ್ವಭಾವ, ಸದಾಶಿವ

[4] ಅದೇ ಪು. ಸಂ.181

ದೀಕ್ಷಿತರ ತಾಳ್ಮೆಗುಣ, ಅಪ್ಪಾಜಿ ತಾನು ಮಾಡಿದ ಕೆಲಸಕ್ಕೆ ಶಿಕ್ಷೆ ಅನುಭವಿಸಿದ್ದು, ಕಳ್ಳತನ, ಲಂಚಕೋರತನ, ಅಮಾಸನ ವ್ಯಕ್ತಿತ್ವ, ಬದುಕಿನಲ್ಲಿ ಆಗುವ ಏರುಪೇರುಗಳು, ಒಳ್ಳೆಯವರು ಸಾವನ್ನು ಗೆಲ್ಲುವರು ಎಂಬ ನಿದರ್ಶನ ಇತ್ಯಾದಿ ಅಂಶಗಳನ್ನು ಎತ್ತಿಹಿಡಿಯುತ್ತದೆ.

**ಆಕರ ಗ್ರಂಥ**


- ಪುಟ್ಟಣ್ಣ, ಎಂ.ಎಸ್. (1992). *ಮಾಡಿದ್ದುಣ್ಣೋ ಮಹಾರಾಯ.* ಶೇಶಮ್ಮ ಚಿದಂಬರಂ ಕಾವ್ಯಾಲಯ


**ಪರಾಮರ್ಶನ ಗ್ರಂಥಗಳು**


- ಬಸವಣ್ಣ, ಎಂ. *ಸೈಕಲಾಜಿಕಲ್ ಕಾಂಪ್ಲೆಕ್ಸ್‌ಗಳು.* ಅಭಿನವ ಪ್ರಕಾಶನ
- ಗಿರಿ. (1999). *ಗತಿಸ್ಥಿತಿ.* – ಅಂಕಿತ ಪುಸ್ತಕ
- ನಾಗಭೂಷಣಸ್ವಾಮಿ, ಓ.ಎಲ್. (2021). *ಪ್ರಜ್ಞಾಪ್ರವಾಹ ತಂತ್ರ.* ಕರ್ನಾಟಕ ಸಾಹಿತ್ಯ ಅಕಾಡೆಮಿ.
- ನಾಯಕ, ಈ.ಎ. (2006). *ಕೃತಿ ಸಾಕ್ಷಿ.* ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
- ರಂಗನಾಥರಾವ್, ಈ.ಎನ್. *ಕನ್ನಡದ ಮೊದಲ ಕಾದಂಬರಿಗಳು.* ವಸಂತ ಪ್ರಕಾಶನ.
- ಶಶಿಕಲಾ, ಎಚ್. (2021). *ಕನ್ನಡ ಕಾದಂಬರಿ ಲೋಕ.* ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಸುಮಿತ್ರಾಬಾಯಿ, ಬಿ.ಎನ್. (2018). *ಸ್ತ್ರೀವಾದ (ಒಂದು ಅವಲೋಕನ).* ಅಹರ್ನಿಶಿ ಪ್ರಕಾಶನ